# ಚೆಲ್ಲದಿರಿ ಆಹಾರ..



ಮನೆಗಳಲ್ಲಿ ಆಹಾರ ಮಿಕ್ಕಿದರೆ ಅದನ್ನು ಎಸೆಯುವವರಿದ್ದಾರೆ. ಕೆಲವರಿಗೆ ಹಳೆಯ ಆಹಾರ ಪದಾರ್ಥಗಳೆಂದರೆ ತಾತ್ಸಾರ, ಇನ್ನು ಕೆಲವರಿಗೆ ಮಡಿವಂತಿಕೆ. ಆರೋಗ್ಯಕರ ದೃಷ್ಟಿಯಿಂದ ಅಷ್ಟೊಂದು ಉತ್ತಮ ಪರಿಪಾಠ ಇದಲ್ಲದಿದ್ದರೂ ಬೇಡವೆಂದು ಎಸೆಯುವ ಬದಲು ಉಳಿಸಿ ತಿನ್ನುವುದು ಒಳಿತು.

■ ಸವಿತಾ ಶಾಂತಪ್ರಿಯ

'ಕುಡಿವ ನೀರೆ ತೀರ್ಥ, ತಿನ್ನುವ ರೊಟ್ಟಿ ಶಿವನ ಪ್ರಸಾದವು' ಇದು ನಾವು ಬಾಲ್ಯದಲ್ಲಿ ಕೇಳಿದ ಒಂದು ಜನಪ್ರಿಯ ಹಾಡಿನ ತುಣುಕು. ತಿನ್ನುವ ಆಹಾರ ದೇವರ ಪ್ರಸಾದ, ಅದು ಪವಿತ್ರವಾದುದು ಎಂಬ ಭಾವನೆ ನಮ್ಮ ಪರಂಪರೆಯಲ್ಲಿದೆ. ಆಹಾರ ಸೇವನೆಯೆಂಬುದು ಒಂದು ಪವಿತ್ರ ಯಜ್ಞ ಎಂಬ ಪರಿಕಲ್ಪನೆಯೊಂದಿಗೆ ಅನ್ನವೇ ದೇವರು, ಅನ್ನವೇ ಬ್ರಹ್ಮ ಎಂದು ಪೂಜಿಸಿ ಸ್ವೀಕರಿಸುವುದು ನಮ್ಮ ವೈದಿಕ ಪರಂಪರೆಯಲ್ಲಿಯೂ ಇದೆ. 'ಅನ್ನ ಚೆಲ್ಲಬೇಡ. ಪ್ರತಿ ಅಗುಳೂ ನೀನು ಸ್ವೀಕರಿಸಿಲ್ಲವೆಂದು ಅಳುತ್ತದೆ' ಎಂದೋ, 'ಇಂದು ನೀನು ಬಿಸಾಡಿದ ಪ್ರತಿ ಅಗುಳಿಗಾಗಿ ಮುಂದೆ ನೀನು ಅಂಗಲಾಚ ಬೇಕಾಗುತ್ತದೆ' ಎಂದೋ ಹಿರಿಯರು ಮಕ್ಕಳಿಗೆ ಬುದ್ಧಿ ಹೇಳುವುದುಂಟು.

ಇನ್ನೇನು ವಸಂತನ ಆಗಮನವಾಗುವ ಕಾಲ. ಎಲ್ಲೆಂದರಲ್ಲಿ ಮರಗಿಡಗಳಲ್ಲಿ ಹೂ ಹಣ್ಣು ಬಿಡುವ ಕಾಲ. ಆದರೆ ನಮ್ಮ ಸುತ್ತ ಮುತ್ತ ನೋಡಿದರೆ ಅದೆಷ್ಟು ಮರಗಳಲ್ಲಿ ಮಾವಿನಹಣ್ಣು, ಹಲಸಿನ ಹಣ್ಣು ಕೊಯ್ಯುವವರಿಲ್ಲದೆ ಅಲ್ಲೇ ಕೆಳಗೆ ಬಿದ್ದು ಕೊಳೆಯುತ್ತಿರುತ್ತವೆ. ಅದೇ ರೀತಿ ಇನ್ನೊಂದೆಡೆ ಬರದ ಭೀಕರತೆಯಿಂದಾಗಿ ಆಹಾರ ನೀರು ಸಿಕ್ಕದೆ ಪ್ರಾಣಿ ಪಕ್ಷಿಗಳು ಕಂಗೆಡುತ್ತಿವೆ. ಒಂದೆಡೆಯಲ್ಲಿ ತಿನ್ನುವವರಿಲ್ಲದೆ ಕೊಳೆಯುತ್ತಿದ್ದರೆ ಇನ್ನೊಂದೆಡೆ ಆಹಾರವಿಲ್ಲದೆ ಜೀವಸಂಕುಲ ನಶಿಸುತ್ತಿದೆ. ತುಂಡು ರೊಟ್ಟಿಗಾಗಿ ಮುಷ್ಟಿ ಕಾಳಿಗಾಗಿ ಜನ ಪರಿತಪಿಸುವ ಸ್ಥಿತಿಯೂ ಕೆಲವೆಡೆ ಕಂಡುಬರುತ್ತಿದೆ. ಇಷ್ಟೆಲ್ಲಾ ಇದ್ದರೂ ಆಹಾರವನ್ನು ಹಾಳು ಮಾಡುವುದು, ವ್ಯರ್ಥ ಮಾಡುವುದು ನಮ್ಮಲ್ಲಿ ಅನೇಕರು ಪರಿಪಾಲಿಸಿಕೊಂಡು ಬರುತ್ತಿರುವ ಪದ್ಧತಿ.

ಆಹಾರ ಪೋಲು ಎಂದರೇನು? ಎಲ್ಲಿ ಆಹಾರ ಪೋಲಾಗುತ್ತದೆ? ಭಾರತ ಕೃಷಿ ಪ್ರಧಾನ ದೇಶ. ಆಹಾರ ಪೋಲಾಗುವುದೆಂದರೆ ಜೀವ ಜಂತುಗಳಿಗೆ, ಮಾನವ ಸಂಕುಲಕ್ಕೆ ಆಹಾರವಾಗಬಹುದಾದ ಯಾವುದೇ ಒಂದು ವಸ್ತು ತಿನ್ನುವವರಿಲ್ಲದೆ ಹಾಳಾಗುವುದು, ವ್ಯರ್ಥವಾಗಿ ಹೋಗುವುದು. ಒಂದು ಲೆಕ್ಕಾಚಾರದ ಪ್ರಕಾರ ಭಾರತ ದೇಶದಲ್ಲಿ ಬೆಳೆಯುವ ಆಹಾರ ಪದಾರ್ಥಗಳಲ್ಲಿ ಶೇ. 40ರಷ್ಟು ಬೆಳೆಯುವ, ಸಾಗಾಣಿಕೆಯ ಹಾಗೂ ಶೇಖರಣೆಯ ಹಂತದಲ್ಲಿ ಪೋಲಾಗಿ ಹೋಗುವುದು. ಸುಮಾರು 21 ಮಿಲಿಯ ಟನ್ನುಗಳಷ್ಟು ಗೋಧಿ ಬೆಳೆಯು ಸಾಗಾಟದ ಶೇಖರಣೆಯ ವ್ಯವಸ್ಥೆಯಿಲ್ಲದೆ ವ್ಯರ್ಥವಾಗುವುದು. 2013ರ ದಾಖಲೆಯ ಪ್ರಕಾರ ನಮ್ಮಲ್ಲಿ ಒಟ್ಟಾರೆಯಾಗಿ ಹಾಳಾಗುವ ಆಹಾರ ಪದಾರ್ಥಗಳ ಒಟ್ಟು ಮೌಲ್ಯ 44,000 ಕೋಟಿ ರೂಪಾಯಿ ಹಾಗೂ ಹಣ್ಣುಹಂಪಲುಗಳ ಮೌಲ್ಯ 13,300 ಕೋಟಿ ರೂಪಾಯಿ.

ನಮ್ಮ ದೇಶ ಆಹಾರ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿ ನಿಲ್ಲುತ್ತದೆ. ಹಣ್ಣುಗಳನ್ನು ಬೆಳೆಯುವಲ್ಲಿ ವಿಶ್ವದಲ್ಲೇ ದ್ವಿತೀಯ ಸ್ಥಾನದಲ್ಲಿದೆ. ಆದರೆ ಬೆಳೆದ ಹಣ್ಣುಗಳಲ್ಲಿ ಶೇ. 70ರಷ್ಟು ಕೊಳೆತು ವ್ಯರ್ಥವಾಗುವುದೆಂಬುದು ಒಂದು ಅಂದಾಜು. ವಿಶ್ವದಲ್ಲೇ ಹಾಲು ಉತ್ಪಾದನೆಯಲ್ಲಿ ಮುಂದಿದ್ದರೂ ಹಸಿವಿನಿಂದ ಕಂಗೆಡುತ್ತಿರುವ ವಿಶ್ವದ 78 ರಾಷ್ಟ್ರಗಳಲ್ಲಿ ಭಾರತ 63ನೆಯ ಸ್ಥಾನದಲ್ಲಿದೆ. ಶೇಕಡಾ 47ರಷ್ಟು ಭಾರತೀಯ ಮಕ್ಕಳು ವಿಶ್ವದ ಸಾಮಾನ್ಯ ತೂಕಮಾಪನಕ್ಕಿಂತ ಕೆಳಗಿದ್ದಾರೆ ಎಂದು ಯುನಿಸೆಫ್ ವರದಿ ಹೇಳುತ್ತದೆ. ಅಂದರೆ ನಮ್ಮಲ್ಲಿ ಆಹಾರ ಉತ್ಪಾದನೆಯಲ್ಲಿ ಗಣನೀಯ ಪರಿವರ್ತನೆಗಳು ಕಂಡುಬಂದರೂ ಬೆಳೆದ ಆಹಾರ ಅಗತ್ಯವಿರುವ ಮಂದಿಗೆ ಸಿಗುತ್ತಿಲ್ಲ. ಹಸಿದ ಬಾಯಿಗೆ ಸಾಕಷ್ಟು ಅನ್ನ ಉಣಿಸುವುದಕ್ಕೆ ಪೂರಕ ವ್ಯವಸ್ಥೆ ನಮ್ಮಲ್ಲಿಲ್ಲ. ಬೇಗನೇ ಹಾಳಾಗಿ ಹೋಗುವ ಹಾಲು ಹಣ್ಣು ಶೇಖರಣೆಗೆ ಬೇಕಾದ ಆಧುನಿಕ ವ್ಯವಸ್ಥೆ ನಮ್ಮಲ್ಲಿಲ್ಲ. ಸಾಕಷ್ಟು ಕೋಲ್ಡ್‌ಸ್ಟೋರೇಜ್‌ಗಳೂ ಇಲ್ಲ. ಆಹಾರ ಪದಾರ್ಥಗಳ ಸಾಗಾಟ ಸರಪಣಿಯೂ ಸರಿಯಾಗಿಲ್ಲ. ಅವುಗಳ ಸಂಸ್ಕರಣೆ ಮಾಡಿ ಪೂರಕ ಆಹಾರವನ್ನಾಗಿಸುವ ಪ್ರಯತ್ನಗಳೂ ಅಧ್ಯಯನಗಳೂ ಲ್ಯಾಬೊರೇಟರಿಯಿಂದ ಹೊರ ಬರುತ್ತಿಲ್ಲ.

ಇದೆಲ್ಲ ಒಂದೆಡೆಯಾದರೆ ನಮ್ಮಲ್ಲಿ ತಿನ್ನುವ ಪದ್ಧತಿ ಸರಿಯಾಗಿಲ್ಲದೆ ಕಂಡ ಕಂಡದ್ದನ್ನು ಕೊಂಡು ಅರ್ಧ ತಿಂದು ಒಂದಿಷ್ಟು ಚೆಲ್ಲಿ ಹಾಳುಗೆಡಹುವ ಅಭ್ಯಾಸದಿಂದಾಗಿ ಆಹಾರ ಪದಾರ್ಥ ಹಾಳಾಗುವುದೂ ಸಾಕಷ್ಟು ಪ್ರಮಾಣದಲ್ಲೇ ಇದೆ. ಪೂಜೆ, ಮದುವೆ, ಪಾರ್ಟಿಯೆಂದು ಬಗೆಬಗೆಯ ಭಕ್ಷ್ಯ ಗಳನ್ನು ತಯಾರಿಸಿ ಚೆಲ್ಲುವ ಬಗ್ಗೆ ಒಂದಿಷ್ಟು ಗಂಭೀರವಾಗಿಯೇ ಚಿಂತಿಸಬೇಕಾಗಿದೆ.

ಭಾರತೀಯ ಆಹಾರ ಪದ್ಧತಿ ಅತ್ಯಂತ ರುಚಿಕರ, ವೈವಿಧ್ಯಪೂರ್ಣ. ಬಗೆ